**ಓ ಎಸ್ 73/2022 ಡಿಡಬ್ಲ್ಯೂ 1**

**ಸಾಕ್ಷಿಯನ್ನು ದಿಃ 25.06.2025 ರಂದು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಎಸ್ ಪಿ ವಕೀಲರಿಂದಃ**

ನನ್ನ ತಂದೆಯ ತಂದೆ ಅಂದರೆ ನನ್ನ ತಾತನ ಹೆಸರು ತಿಮ್ಮೇಗೌಡ ಹಾಗೂ ಅಜ್ಜಿಯ ಹೆಸರು ಲಕ್ಷ್ಮಮ್ಮ ಎಂದರೆ ಸರಿ. ಅವರಿಗೆ ನನ್ನ ತಂದೆ ಟಿ ನಾಗೇಗೌಡ, ರತ್ನಮ್ಮ ಹಾಗೂ ವಾದಿ ಇಂದ್ರಮ್ಮ 3 ಜನ ಮಕ್ಕಳು. ನನ್ನ ತಾತ ತಿಮ್ಮೇಗೌಡರು ಬದುಕಿದ್ದಾಗ ತನ್ನ ಮಕ್ಕಳ ನಡುವೆ ಯಾವುದೇ ವಿಭಾಗ ಮಾಡಿಲ್ಲ ಮತ್ತು ದಸ್ತಾವೇಜನ್ನು ಬರೆದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ.

ದಾವಾ ಐಟಂ ನಂ.1 ನನ್ನ ಹಾಗೂ ನನ್ನ ತಂದೆ ತಾಯಿ ಮತ್ತು ನನ್ನ ತಮ್ಮನ ಸ್ವಯಾರ್ಜಿತ. ದಾವಾ ಐಟಂ ನಂ. 1 ನಮ್ಮ ಸ್ವಯಾರ್ಜಿತ ಎಂಬುದು ಸುಳ್ಳು ಮತ್ತು ಅಂತಹ ಯಾವುದೇ ಕ್ರಯಪತ್ರ ಆಗಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂ. 1 ಎಂ ಆರ್ 7/97–98 ರ ಪ್ರಕಾರ ನನ್ನ ತಂದೆ ನಾಗೇಗೌಡರಿಗೆ ಪೌತಿ ಖಾತೆ ಮೂಲಕ ಬಂದಿದೆ ಎಂದರೆ ಸರಿಯಲ್ಲ.

ಅದೇ ರೀತಿ ದಾವಾ ಐಟಂ ನಂ.2 ಸಹ ಎಂ ಆರ್ 108/93–94 ರ ರೀತ್ಯಾ ನನ್ನ ತಂದೆ ಹೆಸರಿಗೆ ಪೌತಿ ಖಾತೆ ಮೂಲಕ ಬಂದಿದೆ ಎಂದರೆ ಸರಿಯಲ್ಲ. ದಾವಾ ಐಟಂ ನಂ. 3 ಸಹ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಅದನ್ನು ತನ್ನ ತಮ್ಮ ಸ್ವಯಾರ್ಜಿತವಾಗಿ ಸಂಪಾದಿಸಿದ್ದಾನೆ ಎಂದು ಹೇಳುತ್ತಾರೆ. ದಾವಾ ಆಸ್ತಿಗಳೆಲ್ಲವೂ ನಮ್ಮ ತಂದೆಗೆ ಪಿತ್ರಾರ್ಜಿತವಾಗಿ ಬಂದಂತಹ ಆಸ್ತಿಗಳು ಎಂದರೆ ಎಲ್ಲಾ ಆಸ್ತಿಗಳು ನಮ್ಮ ತಂದೆಗೆ ಮಾತ್ರ ಸೇರಿರುವ ಕಾರಣ

ಅವುಗಳಲ್ಲಿ ಇಂದ್ರಮ್ಮನಿಗಾಗಲೀ, ರತ್ನಮ್ಮನಿಗಾಗಲೀ ಭಾಗ ಇಲ್ಲ.

ದಾವಾ ಆಸ್ತಿಗಳಲ್ಲಿ ವಾದಿಗೆ ಇಂದಿನವರೆಗೂ ಯಾವುದೇ ಪಾಲು ನೀಡಿಲ್ಲ ಎಂದರೆ ರತ್ನಮ್ಮ ಮತ್ತು ಇಂದ್ರಮ್ಮರವರು ನಾನು ಹುಟ್ಟಿದಾಗಿನಿಂದಲೂ ಪಾಲು ಕೇಳಿಕೊಂಡು ನಮ್ಮ ಮನೆಗೆ ಬಂದಿಲ್ಲ. ಈ ದಾವೆ ಹೂಡುವುದಕ್ಕಿಂತ ಮೊದಲು ವಾದಿಯು ನನ್ನ ತಂದೆ ಬಳಿ ಬಂದು ತನ್ನ ಪಾಲನ್ನು ಕೇಳಿದರು ಎಂದರೆ ಸರಿಯಲ್ಲ. ನನ್ನ ತಂದೆಯು ಪಾಲು ನೀಡಲು ತಿರಸ್ಕರಿಸಿದ ಕಾರಣ ವಾದಿಯು ಈ ದಾವೆ ಹೂಡಿದ್ದಾರೆ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ 75/2017 ರಲ್ಲಿ ವಾದಿಯನ್ನು ಪಕ್ಷಕಾರರನ್ನಾಗಿ ಮಾಡಿರಲಿಲ್ಲ ಎಂದರೆ ಸರಿ. ಸದರಿ ಅಸಲು ದಾವಾ ಸಂಖ್ಯೆ 75/2017 ರಲ್ಲಿ ಇರುವ ಆಸ್ತಿಗಳು ಮತ್ತು ಈ ದಾವೆಯಲ್ಲಿರುವ ಆಸ್ತಿಗಳು ಒಂದೇ ಆಗಿವೆ ಎಂದರೆ ಸರಿ. ಅಸಲು ದಾವೆ ಸಂಖ್ಯೆ 75/17 ರಲ್ಲಿನ ದಾವಾ ಆಸ್ತಿಗಳು ನಮ್ಮ ಪಿತ್ರಾರ್ಜಿತ ಹಾಗೂ ಒಟ್ಟು ಕುಟುಂಬದ ಆಸ್ತಿ ಎಂದು ಘೋಷಣೆ ಮಾಡಿದ್ದೇವೆ ಎಂದರೆ ನಮ್ಮ ಪಿತ್ರಾರ್ಜಿತ ಮತ್ತು ನಮ್ಮ ಒಟ್ಟು ಕುಟುಂಬದ ಅಂದರೆ ನನ್ನ ತಂದೆ, ತಾಯಿ, ನಾನು, ನನ್ನ ತಮ್ಮ ಮತ್ತು ಹಾಗೂ ತಂಗಿಯನ್ನು ಒಳಗೊಂಡ ಒಟ್ಟು ಕುಟುಂಬದ ಆಸ್ತಿ ಎಂದು ಹೇಳಿದ್ದೇವೆ.

ಅಸಲು ದಾವಾ ಸಂಖ್ಯೆ 75/2017 ರಲ್ಲಿ ನಮ್ಮ ತಾತ ಅಜ್ಜಿ ಹಾಗೂ ಅವರ ಮಕ್ಕಳನ್ನು ಒಳಗೊಂಡ ವಂಶವೃಕ್ಷವನ್ನು ನಾವು ಹಾಜರುಪಡಿಸಿರಲಿಲ್ಲ ಎಂದರೆ ಸರಿಯಲ್ಲ. ನಮ್ಮ ತಾತ ಮತ್ತು ಅಜ್ಜಿಯ ಮಕ್ಕಳು ಎಲ್ಲರೂ ಸಹ ಜೀವಂತ ಇದ್ದಾರೆ ಎಂದು ಆ ದಾವೆಯಲ್ಲಿ ನಾವು ಹೇಳಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಮ್ಮ ಅತ್ತೆಯರು ಜೀವಂತ ಇದ್ದಾರೆ ಎಂದು ನಮ್ಮ ರಾಜಿ ಅರ್ಜಿಯಲ್ಲಿ ಹೇಳಲಾಗಿದೆಯೇ ಎಂದರೆ ನಮ್ಮ ಅತ್ತೆಯವರು ಭಾಗ ಬೇಡ ಎಂದು ಹೇಳಿದ್ದರು. ಹಾಗೆ ಭಾಗ ಬೇಡ ಎಂದ ಹೇಳಿದ ಬಗ್ಗೆ ದಾಖಲೆ ಮಾಡಿಕೊಂಡಿದ್ದಾರೋ ಇಲ್ಲವೋ ಎಂಬುದನ್ನು ನನ್ನ

ತಂದೆಯನ್ನು ಕೇಳಬೇಕು.

ನನಗೂ ಮತ್ತು ನನ್ನ ತಮ್ಮನಿಗೆ ತಿಂಗಳಿಗೆ ಒಮ್ಮೆ ಸಂಬಳ ಬರುವ ಉದ್ಯೋಗ ಇಲ್ಲ ಎಂದರೆ ಸರಿ. ನಮಗೆ ಪ್ರತಿ ತಿಂಗಳು ನಿರ್ದಿಷ್ಟವಾಗಿ ಇಷ್ಟೆ ಸಂಬಳ ಬರುತ್ತದೆ ಎಂದು ಇಲ್ಲ. ಸಾಕ್ಷಿ ಮುಂದುವರಿದು ತಾನು ಮತ್ತು ತನ್ನ ತಮ್ಮ ಟಿಪ್ಪರ್ ಲಾರಿ ಓಡಿಸಿ ಬರುವ ಆದಾಯವನ್ನು ತಮ್ಮ ತಂದೆಗೆ ನೀಡಿ ಆಸ್ತಿಗಳನ್ನು ಖರೀದಿಸಿರುವುದಾಗಿ ಹೇಳುತ್ತಾರೆ. ನಾನು, ನನ್ನ ತಮ್ಮ, ನನ್ನ ಸಹೋದರಿ ಹಾಗೂ ನನ್ನ ತಾಯಿ ಬಿಪಿಎಲ್ ಕಾರ್ಡ ಹೊಂದಿದ್ದೇವೆ ಎಂದರೆ ಸರಿ. ಕುಟುಂಬದ ವಾರ್ಷಿಕ ಆದಾಯ ರೂ. 11,000/- ಇರುವವರಿಗೆ ಮಾತ್ರ ಬಿ ಪಿ ಎಲ್ ಕಾರ್ಡ ಕೊಡುತ್ತಾರೆ ಎಂದರೆ ಸರಿ. ನಮ್ಮ ಕುಟುಂಬಕ್ಕೆ ವ್ಯವಸಾಯದ ಮೂಲಕ ಹೆಚ್ಚಿನ ಆದಾಯ ಬರುತ್ತದೆ ಎಂದರೆ ಕಲ್ಲು ಗಣಿಗಾರಿಕೆ ಹಾಗೂ ಟಿಪ್ಪರ್ ಲಾರಿಯಿಂದ ಬರುತ್ತಿದೆ.

ನಿ ಡಿ 1 ಮತ್ತು 2 ನನ್ನ ತಂದೆಯ ಸ್ವಯಾರ್ಜಿತ ಸಂಪಾದನೆಗೆ ಸಂಬಂಧಿಸಿದ ದಾಖಲೆ ಎಂದರೆ ಸರಿ. ಸಾಕ್ಷಿ ಮುಂದುವರಿದು ತಾನು ಹಾಗೂ ತನ್ನ ತಮ್ಮ ಸಂಪಾದನೆ ಮಾಡಿ ಬಂದ ಹಣವನ್ನು ತನ್ನ ತಂದೆಗೆ ನೀಡಿದ್ದು ಆ ಮೂಲಕ ಎಲ್ಲರೂ ಸೇರಿ ನಿ ಡಿ 1 ಮತ್ತು 2 ರಲ್ಲಿ ಆಸ್ತಿಗಳನ್ನು ಸಂಪಾದಿಸಿರುವುದಾಗಿ ಹೇಳುತ್ತಾರೆ. ನಿ ಡಿ 1 ಮತ್ತು 2 ರಲ್ಲಿ ಇರುವ ಆಸ್ತಿಗಳು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳಾಗಿರುವ ಕಾರಣ ವಾದಿಯು ಅವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಿ ಡಿ 3 ರಲ್ಲಿರುವ ಇ ಸ್ವತ್ತು ದಾಖಲೆಯಲ್ಲಿ ನಮೂದು ಆಗಿರುವ ಆಸ್ತಿಯು ನಮ್ಮ ಸ್ವಯಾರ್ಜಿತ. ನಿ ಡಿ 3 ರಲ್ಲಿ ಇರುವ ಆಸ್ತಿಯು ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಯಾಗಿರುವ ಕಾರಣ ವಾದಿಯು ಅವುಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

ಅಸಲು ದಾವಾ ಸಂಖ್ಯೆ 75/17 ನ್ನು ದಾಖಲು ಮಾಡುವುದಕ್ಕಿಂತ ಮೊದಲು ನಮ್ಮ ಕುಟುಂಬದ ಯಾರೂ ಸಹ ವಾದಿಗೆ ತಗಾದೆ ನೋಟೀಸನ್ನು ಕಳುಹಿಸಿರಲಿಲ್ಲ

ಎಂದರೆ ನನಗೆ ಗೊತ್ತಿಲ್ಲ. ನಿ ಡಿ 6 ರಲ್ಲಿರುವ ಅಸಲು ದಾವಾ ಸಂಖ್ಯೆ 75/17 ರ ರಾಜಿ ಡಿಕ್ರಿಯ ಅನುಸಾರ ಇದುವರೆಗೂ ಕಂದಾಯ ದಾಖಲೆಗಳು ನಮ್ಮ ನಮ್ಮ ಹೆಸರಿಗೆ ವರ್ಗಾವಣೆ ಆಗಿಲ್ಲ ಎಂದರೆ ಸರಿ. ಅಸಲು ದಾವಾ ಸಂಖ್ಯೆ 75/17 ರಲ್ಲಿ ನನ್ನ ಸಹೋದರಿ ನೇತ್ರಾವತಿಯು ದಾವಾ ಆಸ್ತಿಗಳೆಲ್ಲವೂ ಪಿತ್ರಾರ್ಜಿತ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ಆ ದಾವೆಯಲ್ಲಿ ಯಾರೂ ಸಹ ದಾವಾ ಆಸ್ತಿಗಳನ್ನು ಸ್ವಯಾರ್ಜಿತ ಎಂದು ಹೇಳದೆ ಪಿತ್ರಾರ್ಜಿತ ಎಂದು ಹೇಳಿದ್ದು ನಾವು ಅದನ್ನು ಒಪ್ಪಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಈ ದಾವೆಯ ದಾವಾ ಆಸ್ತಿಗಳು ನಮ್ಮ ಸ್ವಯಾರ್ಜಿತ ಎಂದು ತೋರಿಸಲು ಯಾವುದೇ ದಾಖ್ಲಲೆಗಳು ಇಲ್ಲ ಎಂದರೆ ಎಲ್ಲಾ ದಾವಾ ಆಸ್ತಿಗಳು ನಮ್ಮ ತಂದೆ ಟಿ ನಾಗೇಗೌಡರ ಹೆಸರಿನಲ್ಲಿ ಇರುವ ಕಾರಣ ಅವು ನಮ್ಮ ಸ್ವಯಾರ್ಜಿತ ಎಂದು ಹೇಳುತ್ತೇನೆ. ದಾವಾ ಆಸ್ತಿಗಳು ನಮ್ಮ ಸ್ವಯಾರ್ಜಿತ ಎಂದು ನಮ್ಮ ಪ್ರತಿವಾದ ಪತ್ರದಲ್ಲಾಗಲೀ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಾಗಲೀ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿಗಳನ್ನು ಹೊರತುಪಡಿಸಿ ಪಿತ್ರಾರ್ಜಿತ ಆಸ್ತಿಗಳನ್ನು ಮಾತ್ರ ಸೇರಿಸಿ ವಾದಿಯು ಈ ದಾವೆಯನ್ನು ಹೂಡಿದ್ದಾರೆ ಎಂದರೆ ಎಲ್ಲಾ ಆಸ್ತಿಗಳು ನಮ್ಮ ತಂದೆಯ ಆಸ್ತಿಗಳಾಗಿವೆ.

ನನ್ನ ಅತ್ತೆಯರಿಗೆ ಮೋಸ ಮಾಡುವ ದುರುದ್ದೇಶದಿಂದ ನಾನು, ನನ್ನ ತಂದೆ, ನನ್ನ ಸಹೋದರ ಮತ್ತು ಸಹೋದರಿ ಸೇರಿ ಅಸಲು ದಾವಾ ಸಂಖ್ಯೆ 75/17 ನ್ನು ಹೂಡಿ ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸದರಿ ದಾವೆಯ ಬಗ್ಗೆ ನನ್ನ ಅತ್ತೆಯಂದಿರ ಗಮನಕ್ಕೆ ತರದೆ ವ್ಯವಹಾರ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ತನ್ನ ಅತ್ತೆಯರ ಗಮನಕ್ಕೆ ತಂದಿದ್ದೇನೆ ಎಂದರೆ ಸರಿಯಲ್ಲ. ನನ್ನ ಅತ್ತೆಯರ ಗಮನಕ್ಕೆ ತರದೆ ಇದ್ದರೂ ಸಹ ಸುಳ್ಳು

ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 75/17 ನ್ನು ಹೂಡುವ ಮೊದಲು ನಮ್ಮ ಅತ್ತೆಯರ ಗಮನಕ್ಕೆ ಆ ದಾವೆ ತಂದಿದ್ದ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿದ್ದೇನೆ. ದಾವಾ ಆಸ್ತಿಗಳಲ್ಲಿ ನನ್ನ ಅತ್ತೆಗೆ ಇರುವ 1/3 ರಷ್ಟು ಭಾಗಾಂಶದ ಹಕ್ಕನ್ನು ತಪ್ಪಿಸುವ ಸಲುವಾಗಿ ಸುಳ್ಳು ಪ್ರತಿವಾದ ಪತ್ರ ಹಾಗೂ ಮುಖ್ಯ ವಿಚಾರಣಾ ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಐಟಂ ನಂ. 3 ನ್ನು ಪಿತ್ರಾರ್ಜಿತ ಆಸ್ತಿಗಳಿಂದ ಬಂದ ಆದಾಯದಿಂದ ಕ್ರಯಕ್ಕೆ ಪಡೆಯಲಾಗಿದೆ ಎಂದರೆ ನಾನು, ನನ್ನ ತಮ್ಮ ಹಾಗೂ ನನ್ನ ತಂದೆ ದುಡಿದು ಸಂಪಾದನೆ ಮಾಡಿದ ಹಣದಿಂದ ಕ್ರಯಕ್ಕೆ ಪಡೆದಿದ್ದೇವೆ. ಸದರಿ ಕ್ರಯಪತ್ರದಲ್ಲಿ ತೋರಿಸಿರುವ ಕ್ರಯದ ಮೊಬಲಗು ನಮ್ಮ ಕುಟುಂಬದ ಆದಾಯವನ್ನು ಮೀರಿದ ಮೊಬಲಗು ಎಂದರೆ ಕಲ್ಲು ಗಣಿಗಾರಿಕೆ, ಟಿಪ್ಪರ್, ಟ್ರ್ಯಾಕ್ಟರ್ ಯಿಂದ ಒಳ್ಳೆ ಆದಾಯ ಬರುತ್ತದೆ. ಕಲ್ಲು ಗಣಿಗಾರಿಕೆ, ಟಿಪ್ಪರ್, ಟ್ರ್ಯಾಕ್ಟರ್ ನಿಂದ ಯಾವುದೇ ಆದಾಯ ಇಲ್ಲದೆ ಇದ್ದರೂ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ)**

**ಸಾ ಓ ಹೇ ಸ ಒ**

**(ಬಾಬು ಎನ್)**
**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಪಾಂಡವಪುರ**